## ವಾರ್ತಾ ವಿಶ್ಲೇಷಣೆ

**ತಮಿಳು ನಾಡಿನಲ್ಲಿ ಸಿಂಧೂ ಸಂಸ್ಕೃತಿಯ ಕುರುಹುಗಳು:** ತಮಿಳು ಅಧ್ಯಯನ ಪತ್ರಿಕೆಯ ಜೂನ್ ೨೦೦೭ ನೆಯ ಸಂಚಿಕೆಯಲ್ಲಿ, ವಿಶೇಷ ಲೇಖನವೊಂದು ಪ್ರಕಟವಾಗಿದೆ. ಅದರ ಪ್ರಕಾರ, ತಮಿಳು ನಾಡಿನ ಪೊಂಪುಹಾರ್ ಬಳಿ ದೊರೆತಿರುವ ನೂತನ ಶಿಲಾಯುಗದ ಕೆಲವು ಮಡಕೆಗಳ ಮೇಲೆ, ಹರಪ್ಪಾ-ಮೊಹೆಂಜೊದಾರೋಗಳಲ್ಲಿ ಕಂಡುಬಂದ ಲಿಪಿಯನ್ನೇ ಹೋಲುವ ಚಿಹ್ನೆಗಳು ಕಂಡು ಬಂದಿವೆ. ಬಾಣಗಳಂತೆ ಇರುವ ಆ ಚಿಹ್ನೆಗಳು ಯಾವಾಗಲೂ ಜೋಡಿಯಾಗಿ ಕಂಡುಬರುತ್ತವೆ. ಈ ಅಂಶವನ್ನು ಹರಪ್ಪಾದಲ್ಲಿ ದೊರೆತಿರುವ ಮಡಕೆಗಳ ಚೂರುಗಳಲ್ಲಿಯೂ ಗಮನಿಸಬಹುದಾಗಿದೆ. ಹೀಗಾಗಿ, ಸಿಂಧೂ ನಾಗರಿಕತೆಯ ಲಿಪಿಯ ಪರಿಣತರಾದ ಶ್ರೀ ಇರಾವತಮ್ ಮಹಾದೇವನ್ ಅವರು ಸಿಂಧೂ ಲಿಪಿ ಮತ್ತು ತಮಿಳುನಾಡಿನ ಮಡಕೆಗಳಲ್ಲಿ ಕಂಡುಬರುವ ಲಿಪಿಗಳ ನಡುವೆ ಸಾಮ್ಯತೆ ಇದೆ ಎಂದು ಹೇಳುತ್ತಾರೆ. ಅದಲ್ಲದೆ, ತಮಿಳುನಾಡಿನ ದಿಂಡಿವನಂ ಮತ್ತು ಕೇರಳದ ಮುಸಿರಿಗಳಲ್ಲಿ ಕಂಡು ಬಂದ ಪಳೆಯುಳಿಕೆಗಳಲ್ಲೂ ಇದೇ ಅಂಶವನ್ನು ಕಾಣಬಹುದಾಗಿದೆ. ಇನ್ನೊಂದು ಆಸಕ್ತಿಯ ಸಂಗತಿಯೆಂದರೆ, ಕೊಯಮತ್ತೂರಿನ ಬಳಿ ಸೂಲೂರು ಎಂಬಲ್ಲಿ ದೊರೆತಿರುವ ಮಣ್ಣಿನ ತಟ್ಟೆಗೂ, ಹರಪ್ಪಾ ಮುಂತಾದ ಕಡೆ ದೊರೆತಿರುವ ಅದೇ ರೀತಿಯ ತಟ್ಟೆಗಳಿಗೂ ಸಾಮ್ಯತೆ ಇರುವುದು.

ನಮ್ಮ ದೇಶದ ಮೇಲೆ ಆರ್ಯರು ದಾಳಿ ಮಾಡಿದರು. ಅದಕ್ಕೂ ಹಿಂದೆ ಇಲ್ಲಿ ದ್ರಾವಿಡ ಜನಾಂಗವಿತ್ತು ಎಂಬ ಹುಸಿನಂಬಿಕೆ ಈತ್ತೀಚೆಗೆ ನಡೆದ ಹಲವಾರು ಸಂಶೋಧನೆಗಳಿಂದ ಸುಳ್ಳೆಂದು ಸಾಬೀತಾಗುತ್ತಿದೆ. ದಕ್ಷಿಣದ ತುದಿಯಲ್ಲಿ ದೊರೆತಿರುವ ಮೇಲಿನ ಕುರುಹುಗಳು, ಸಿಂಧೂ ನದಿಯ ದಡದಿಂದ ಕನ್ಯಾಕುಮಾರಿಯವರೆಗೂ ಒಂದೇ ಸಂಸ್ಕೃತಿ ಇತ್ತೆಂದು ಸಾಬೀತುಪಡಿಸುವಲ್ಲಿ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. ಇದರಿಂದ ಭಾರತ ಐತಿಹಾಸಿಕವಾಗಿ ಒಂದು ಅಖಂಡವಾದ ದೇಶ, ಭಾರತೀಯರೆಲ್ಲ ಒಂದೇ ಜನಾಂಗ ಎಂಬ ಪ್ರಜ್ಞೆ ಮೂಡುವಲ್ಲಿ ಬಹುಮಟ್ಟಿಗೆ ಸಹಾಯಕವಾಗುತ್ತದೆ. (ದಿ ಹಿಂದೂ, ಮೇ ೩, ೨೦೦೮)

**ಅಧಿಕವಾಗುತ್ತಿರುವ ಆಹಾರದ ಅಭಾವ:** ಕಳೆದ ಎರಡು ವರ್ಷಗಳಿಂದ ಪ್ರಪಂಚದಾದ್ಯಂತ ಆಹಾರದ ಬೆಲೆಗಳು ಗಗನಕ್ಕೇರುತ್ತಿವೆ. ಲಕ್ಷಾಂತರ ಮಂದಿ ಇದರಿಂದ ಪೀಡಿತರಾಗಿದ್ದಾರೆ, ಸರ್ಕಾರಗಳು ಏನೂ ಮಾಡಲಾಗದೆ ದಿಕ್ಕುಗೆಟ್ಟಿವೆ. ಮೆಕ್ಸಿಕೋದಿಂದ ಭಾರತದವರೆಗೆ ನಡೆಯುತ್ತಿರುವ ವಿರೋಧಿ ಪ್ರದರ್ಶನಗಳು ಹಿಂಸಾತ್ಮಕ ರೂಪವನ್ನು ತಾಳಿವೆ. ಕಳೆದ ತಿಂಗಳು ಬುರ್ಕಿನಾ ಫಾಸೋ ಎಂಬ ಪಶ್ಚಿಮ ಆಫ್ರಿಕನ್ ದೇಶದ ಜನರು ಮೂರು ಪಟ್ಟಣಗಳಲ್ಲಿದ್ದ ಸರ್ಕಾರಿ ಕಟ್ಟಡಗಳನ್ನು ಸುಟ್ಟರಲ್ಲದೆ, ಧವಸಧಾನ್ಯಗಳ ಅಂಗಡಿಗಳನ್ನು ಲೂಟಿ ಮಾಡಿದರು. ಕ್ಯಾಮರೂನ್ ದೇಶದಲ್ಲಿ ಇಂಧನಗಳ ಬೆಲೆ ಏರಿಕೆಯ ವಿರುದ್ಧ ಪ್ರತಿಭಟಿಸುತ್ತಿದ್ದ ಟ್ಯಾಕ್ಸಿ ಚಾಲಕರ ಮುಷ್ಕರದಲ್ಲಿ ಇಪ್ಪತ್ತು ಜನ ಮರಣಹೊಂದಿದರು. ಭಾರತದಲ್ಲಿಯೂ ಪಶ್ಚಿಮ ಬಂಗಾಳ ರಾಜ್ಯದಲ್ಲಿ, ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಸೂರಾರು ನ್ಯಾಯಬೆಲೆ ಅಂಗಡಿಗಳ ಮೇಲೆ ಆಕ್ರಮಣ ನಡೆಯಿತು. ಆ ಅಂಗಡಿಗಳ ಮಾಲೀಕರು ಆಹಾರ ಪದಾರ್ಥಗಳನ್ನು ಕಳ್ಳಸಂತೆಯಲ್ಲಿ ಮಾರಿಕೊಂಡು, ಲಾಭ ಗಳಿಸುತ್ತಿದ್ದಾರೆ ಎಂಬ ಆರೋಪವೇ ಇದಕ್ಕೆ ಕಾರಣ.

ಅಂತರರಾಷ್ಟ್ರೀಯ ಆಹಾರ ನೀತಿ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಬ್ರೌನ್ ಅವರ ಪ್ರಕಾರ ಇದು ಅತ್ಯಂತ ಗಂಭೀರವಾದ ಭದ್ರತಾ ವಿಷಯವಾಗಿದೆ. ಇತ್ತೀಚಿನ ದಿನಗಳಲ್ಲಿ ಹಲವಾರು ಜನ ಕೇಳುತ್ತಿರುವ ಒಂದೇ ಪ್ರಶ್ನೆಯೆಂದರೆ, ಈ ಸಂಕಟದ ಪರಿಸ್ಥಿತಿ ಇನ್ನೆಷ್ಟು ದಿನಗಳ ಕಾಲ ಇರುತ್ತದೆ ಎಂದು. ಆದರೆ ಪರಿಣತರ ಭವಿಷ್ಯವಾಣಿಗಳೆಲ್ಲವೂ ನಿರಾಶಾದಾಯಕವೇ ಆಗಿವೆ. ಸರ್ಕಾರಗಳು ವಿರೋಧಿ ಪ್ರದರ್ಶನಗಳನ್ನು ನಿಯಂತ್ರಿಸಬಹುದು, ಆದರೆ ಆಹಾರಪದಾರ್ಥಗಳ ಬೆಲೆಯನ್ನು ಇಳಿಸಲು ಅವುಗಳಿಗೆ ಕನಿಷ್ಠ ಪಕ್ಷ ಹತ್ತು ವರ್ಷಗಳಾದರೂ ಬೇಕು. ಈ ಬೆಲೆಯೇರಿಕೆಗೆ ಕೋಟಿಗಟ್ಟಲೆ ಜನ ಹೆಚ್ಚು ಹೆಚ್ಚು ಆಹಾರವನ್ನು ಕೊಳ್ಳುತ್ತಿರುವದೇ ಕಾರಣವಂತೆ. ಅದಲ್ಲದೆ, ಇಂಧನಗಳ ಬೆಲೆ ಏರಿಕೆಯಿಂದ, ರಾಸಾಯನಿಕ ಗೊಬ್ಬರಗಳ ಬೆಲೆಯೂ ಏರಿದೆ; ಆಹಾರ ಪದಾರ್ಥಗಳ ಸಾಗಾಣಿಕೆ ಖರ್ಚೂ ಹೆಚ್ಚಿದೆ. ಅದರೊಂದಿಗೆ ವಿಶ್ವದ ವಿವಿಧ ಭಾಗಗಳಲ್ಲಿ ಕಂಡುಬರುತ್ತಿರುವ ಹವಾಮಾನ ವೈಪರೀತ್ಯವು ಸಮಸ್ಯೆಯನ್ನು ಮತ್ತಷ್ಟು ಜಟಿಲವನ್ನಾಗಿ ಮಾಡಿದೆ. ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾಗಳ ದೀರ್ಘಕಾಲದ ಕ್ಷಾಮದ ಪರಿಸ್ಥಿತಿ, ಚೀನಾ ದೇಶದ ಸುದೀರ್ಘ ಚಳಿಗಾಲ ಮತ್ತು ಉತ್ತರ ಯುರೋಪಿನಲ್ಲಿ ದಾಖಲೆ ನಿರ್ಮಿಸಿದ ತಾಪಮಾನದ ಹೆಚ್ಚಳ – ಇವೆಲ್ಲ ಇದಕ್ಕೆ ಕೆಲವು ನಿದರ್ಶನಗಳು. ಇದರಿಂದಾಗಿ ಸುಗ್ಗಿಕಾಲದಲ್ಲಿ ವೈಪರೀತ್ಯ ಉಂಟಾಗಿ ಕೃಷಿ ಉತ್ಪಾದನೆ ಏರುಪೇರಾಗುವುದು.

ಅದಲ್ಲದೆ, ಅತಿ ಮುಖ್ಯ ಧಾನ್ಯಗಳಾದ ಅಕ್ಕಿ ಮತ್ತು ಗೋಧಿಗಳ ದಾಸ್ತಾನು ದಿನೇ ದಿನೇ ಕಡಿಮೆಯಾಗುತ್ತಿದೆ. ಅಕ್ಕಿಯ ಬೆಲೆ ಕಳೆದ ಇಪ್ಪತ್ತು ವರ್ಷಗಳಲ್ಲಿ ಅಗಾಧವಾಗಿ ಹೆಚ್ಚಾಗಿದೆ. ಅದಕ್ಕೆ ಸಮನಾದ ಪ್ರಮಾಣದಲ್ಲಿ ಧಾನ್ಯಗಳ ಉತ್ಪಾದನಾ ಪ್ರಮಾಣ ಹೆಚ್ಚಾಗುವ ಬದಲು ಕುಗ್ಗುತ್ತಿದೆ. ಈ ಸಂಕಷ್ಟ ಪರಿಸ್ಥಿತಿಯ ಲಾಭ ಪಡೆಯುವವರೂ ನಮ್ಮ ನಡುವೆ ಇದ್ದಾರೆ. ಅವರು ಆಹಾರಧಾನ್ಯಗಳ ಮಾರುಕಟ್ಟೆಯಲ್ಲಿ ಭಾರಿ ಬಂಡವಾಳ ಹೂಡುತ್ತಿದ್ದು, ಅದರಿಂದಾಗಿ ಧಾನ್ಯಗಳ ಬೆಲೆ ಕೃತಕವಾಗಿ ಮತ್ತಷ್ಟು ಏರುತ್ತಿದೆ. ಫೆಬ್ರವರಿಯಲ್ಲಿ ಕಜಕಿಸ್ತಾನದ ಸರ್ಕಾರವು ಗೋಧಿಯ ರಫ್ತನ್ನು ನಿಯಂತ್ರಿಸಿದಾಗ, ಒಂದೇ ದಿನದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ, ಗೋಧಿಯ ಬೆಲೆ ಶೇ. ೨೦ ರಷ್ಟು ಏರಿತಂತೆ! ಭಾರತ, ಈಜಿಪ್ಟ್ ಮತ್ತು ಬಾಂಗ್ಲಾದೇಶಗಳೂ ಇದೇ ಪರಿಸ್ಥಿತಿಯನ್ನು ಎದುರಿಸುತ್ತಿವೆ.

ಆಧುನಿಕ ಯುಗದಲ್ಲಿ ಸುಖಸಾಧನಗಳು ಅಧಿಕವಾದರೂ ಆಹಾರದಂತಹ ಮೂಲಭೂತ ಆವಶ್ಯಕತೆಗೇ ಸಂಕಷ್ಟ ಸ್ಥಿತಿ ಒದಗಿ ಬಂದಿರುವುದು ವಿಪರ್ಯಾಸವೇ ಸರಿ. ಇದಕ್ಕೆ ಮುಖ್ಯ ಕಾರಣ, ಬದಲಾಗುತ್ತಿರುವ ನಮ್ಮ ಜೀವನಶೈಲಿ ಮತ್ತು ಮೂಲಭೂತ ಆವಶ್ಯಕತೆಗಳ ಕಡೆಗಣನೆ. ಆದ್ದರಿಂದ, ನಮ್ಮ ಬಾಳಿನ ಆದ್ಯತೆಗಳನ್ನು ಪುನರ್‌ವಿಶ್ಲೇಷಣೆಗೆ ಒಳಪಡಿಸುವ ಕಾಲ ಈಗ ಒದಗಿಬಂದಿದೆ ಎನ್ನಿಸುತ್ತದೆ. ಇಲ್ಲದಿದ್ದರೆ ನಮ್ಮ ಸರ್ವನಾಶಕ್ಕೆ ನಾವೇ ಆಹ್ವಾನ ನೀಡಿದಂತಾಗುತ್ತದೆ.

(ವಿವೇನ್ ವಾಲ್ಟ್ ಅವರ ಲೇಖನ –ದಿ ಟೈಮ್ಸ್ ಪತ್ರಿಕೆಯ ವೆಬ್ ಸೈಟ್)